ಹಿಂಗಾರಿ ಜೋಳ

ಹಿಂಗಾರಿ ಜೋಳವು ಬೆಳಗಾವಿ ಜಿಲ್ಲೆಯ ಮುಖ್ಯ ಆಹಾರ ಬೆಳೆಯಾಗಿದೆ. ಈ ಬೆಳೆಯನ್ನು ಮುಖ್ಯವಾಗಿ ಮಳೆಯಾಶ್ರಿತ ಬೆಳೆಯಾಗಿ ಬೆಳೆಯಲಾಗುತ್ತಿದೆ. ಜಿಲ್ಲೆಯಲ್ಲಿ ಈ ಬೆಳೆಯನ್ನು 1.45 ಲಕ್ಷ ಹೆಕ್ಟೇರುಗಳಲ್ಲಿ ಬೆಳೆಯುತ್ತಿದ್ದು ಉತ್ಪಾದನೆ 11,852 ಟನ್ ಹಾಗೂ ಉತ್ಪಾದಕತೆ 993 ಕೆಜಿ/ಹೆ ಆಗಿದೆ.





ತಳಗಳ ವಿವರ:

ಹಿಂಗಾರು ಸಂಕರಣ ತಳ

ಡಿಎಸ್‌ಎಚ್–4

ಈ ತಳಯನ್ನು ಖುಷ್ಕಿಯಲ್ಲಿ ವಲಯ 3 ಮತ್ತು 8ರಲ್ಲಿ ಬೆಳೆಯುತ್ತಾರೆ. ಬಿತ್ತನೆಯ ಸಮಯ ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15 ಈ ತಳಯ ಅವಧಿಯು 115–120 ದಿವಸಗಳಾಗಿದ್ದು ಬರ ನಿರೋಧಕ ಹಾಗೂ ಬೇಗ ಮಾಗುವ ತಳಯಾಗಿದ್ದು, ಇದ್ದಲು ಕಾಂಡ ಕೊಳೆ ನಿರೋಧಕ ಶಕ್ತಿ ಹೊಂದಿದೆ.

ಸುಧಾರಿತ ತಳಗಳು

ಬಿಜೆವಿ–44

ಈ ತಳಯನ್ನು ಖುಷ್ಕಿಯಲ್ಲಿ ವಲಯ 3 ಮತ್ತು 8 ಕ್ಕೆ ಶಿಫಾರಸ್ಸು ಮಾಡಲಾಗಿದ್ದು ಬಿತ್ತನೆಯ ಸಮಯ ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15 ಆಗಿದೆ. ಈ ತಳಯ ಅವಧಿಯು 125–130 ದಿವಸಗಳಾಗಿದೆ.

ಎಸ್.ಪಿ.ವಿ–2217

ಈ ತಳಯನ್ನು ವಲಯ 8 ಕ್ಕೆ ಶಿಫಾರಸ್ಸು ಮಾಡಲಾಗಿದ್ದು ಖುಷ್ಕಿ ಸನ್ನಿವೇಶದಲ್ಲಿ ಬೆಳೆಯುತ್ತಾರೆ ಬಿತ್ತನೆಯ ಸಮಯವು ಸೆಪ್ಟೆಂಬರ್ 15 ರಿಂದ ಅಕ್ಟೋಬರ್ 15 ರವರೆಗೆ ಮಾಡಬಹುದು. ಈ ತಳಯ ಅವಧಿಯು 120–125 ದಿವಸಗಳಾಗಿದ್ದು, ಇದ್ದಲು ಕಾಂಡ ಕೊಳೆ ರೋಗ ತಡೆದುಕೊಳ್ಳುವ ಶಕ್ತಿ ಹೊಂದಿರುತ್ತದೆ.

ಬಿತ್ತನೆಗೆ ಬೇಕಾಗುವ ಬೇಸಾಯ ಸಾಮಗ್ರಿಗಳು (ಎಕರೆಗೆ)

ಸಾಮಗ್ರಿಗಳು	ಹಿಂಗಾರು ಖುಷ್ಕಿ
ಬಿತ್ತನೆ ಬೀಜ	2.4–3.0 ಕಿ. ಗ್ರಾಂ.
ಸಾವಯವ ಗೊಬ್ಬರ	0.8–1.2 ಟನ್
ರಾಸಾಯನಿಕ ಗೊಬ್ಬರಗಳು (ಕಿ.ಗ್ರಾಂ.ಗಳಲ್ಲಿ)	
ಸಾರಜನಕ	20
ರಂಜಕ	10
ಪೊಟ್ಯಾಷ್	–
ಸತುವಿನ ಸಲ್ಫೇಟ್	6

ಟ್ರೈಕೋಡರ್ಮಾ	12 ಗ್ರಾಂ
ಅಜೋಸ್ಪಿರಿಲಂ	200 ಗ್ರಾಂ
(ವಲಯ 1 ಮತ್ತು 2 ಎ.ಸಿ.ಡಿ–20 ತಳ)	
ಗಂಧಕ	6 ಗ್ರಾಂ
ಕ್ಯಾಲ್ಸೀಯಂ ಕ್ಲೋರೈಡ್	12 ಗ್ರಾಂ.

ಸೂಚನೆಗಳು

- ರಸಗೊಬ್ಬರಗಳ ಪ್ರಮಾಣವನ್ನು ಮಣ್ಣು ಪರೀಕ್ಷೆ ಆಧಾರದ ಮೇಲೆ ನಿರ್ಧರಿಸಬೇಕು
- ಸತುವಿನ ಸಲ್ಫೇಟ್ ಗೊಬ್ಬರವನ್ನು ಬಿತ್ತುವಾಗ ಸಮಪ್ರಮಾಣದಲ್ಲಿ ಪುಡಿ ಮಾಡಿದ ಕೊಟ್ಟಿಗೆ ಗೊಬ್ಬರದ ಜೊತೆಗೆ, ಬೆರೆಸಿ, ಪ್ರತ್ಯೇಕವಾದ ಬುಕ್ಕದ (ಎಳಕೆಡ್ಡಿ) ಮೂಲಕ ಮಣ್ಣಿನಲ್ಲಿ ಸೇರಿಸಬೇಕು
- ಅಜೋಸ್ಪಿರಿಲಂ ಜೈವಿಕ ಗೊಬ್ಬರ ಬಳಸುವುದರಿಂದ ಶಿಫಾರಸು ಮಾಡಿದ ಸಾರಜನಕದ ಪ್ರಮಾಣದಲ್ಲಿ ಶೇ. 25 ರಷ್ಟು ಉಳಿತಾಯ ಮಾಡಬಹುದು

ಬೀಜೋಪಚಾರ



- ಗಂಧಕ ಬೀಜೋಪಚಾರ ಪೂರ್ವದಲ್ಲಿ ಪ್ರತಿ ಕಿ.ಗ್ರಾಂ. ಬೀಜವನ್ನು 1.5 ಲೀ. ನೀರಿನಲ್ಲಿ 30 ಗ್ರಾಂ. ಕ್ಯಾಲ್ಸೀಯಂ ಕ್ಲೋರೈಡ್ ಬೆರೆಸಿದ ಅಥವಾ ಗೋಮೂತ್ರ (ಶೇ. 25) ಬೆರೆಸಿದ ದ್ರಾವಣದಲ್ಲಿ 8 ಗಂಟೆಗಳ ಕಾಲ ನೆನೆಸಿ ನೆರಳಲ್ಲಿ ಒಣಗಿಸಿ ಬಿತ್ತುವುದರಿಂದ ಬೀಜ ಮೊಳಕೆ ಹಾಗೂ ಸಸಿಗಳ ಬೆಳವಣಿಗೆ ಸುಧಾರಿಸುವುದು.

ಬಿತ್ತನೆ:

- ಬೀಜವನ್ನು 45 ಸೆಂ.ಮೀ. ಅಂತರದ ಸಾಲುಗಳಲ್ಲಿ ಬೀಜದಿಂದ ಬೀಜಕ್ಕೆ 15 ಸೆಂ.ಮೀ. ಅಂತರದಲ್ಲಿ ಬಿತ್ತನೆ ಮಾಡಬೇಕು. ಜೋಳವನ್ನು ಜೋಡು ಸಾಲು ಪದ್ಧತಿಯಲ್ಲಿಯೂ (ಸಾಲಿನಿಂದ ಸಾಲಿಗೆ 30 ಸೆಂ.ಮೀ. ಜೋಡು ಸಾಲಿನ ಮಧ್ಯ 60 ಸೆಂ.ಮೀ.) ಬೆಳೆಯಬಹುದು. ಮುಂಗಾರು/ಬೇಸಿಗೆ (ನೀರಾವರಿ) ಬಿತ್ತನೆಯಲ್ಲಿ ಬೀಜವನ್ನು 2.5–5 ಸೆಂ.ಮೀ. ಆಳದಲ್ಲಿ ಹಾಗೂ ಹಿಂಗಾರು (ಖುಷ್ಕಿ) ಬಿತ್ತನೆಯಲ್ಲಿ ಬೀಜವನ್ನು 5–7 ಸೆಂ.ಮೀ. ಆಳದಲ್ಲಿ ಬಿತ್ತಿದ ದಿನ 5 X 5 ಮೀ. ನ ಚೌಕು ಮಡಿ ಮಾಡುವುದರಿಂದ ಮಣ್ಣಿನಲ್ಲಿ ಮಳೆ ನೀರು ಇಂಗಲು ಅವಕಾಶವಾಗುವುದು.

ಕಳೆ ಹತೋಟಿ:

- ಬೀಜ ಬಿತ್ತಿದ ದಿನ ಅಥವಾ ಮರು ದಿನ ಪ್ರತಿ ಎಕರೆಗೆ 0.4 ಕಿ.ಗ್ರಾಂ. ಅಟ್ರಾಜಿನ್ 50 ಡಬ್ಲ್ಯೂ. ಪಿ ಕಳೆನಾಶಕವನ್ನು 300 ಲೀಟರ್ ನೀರಿನಲ್ಲಿ ಬೆರೆಸಿ ಮಣ್ಣಿನ ಮೇಲೆ ಸಿಂಪಡಿಸಬೇಕು. ಸಿಂಪರಣೆ ಸಮಯದಲ್ಲಿ ಮಣ್ಣು ಹುಡಿಯಾಗಿದ್ದು, ಸಾಕಷ್ಟು ತೇವ ಹೊಂದಿರಬೇಕು. ಅಟ್ರಾಜಿನ್ ಪ್ರಮಾಣ ಶಿಫಾರಸ್ಸಿನ ಪ್ರಮಾಣಕ್ಕಿಂತ ಹೆಚ್ಚಾದಲ್ಲಿ ಜೋಳದ ಮೊಳಕೆ ಪ್ರಮಾಣ ಮತ್ತು ಬೆಳೆ ಕುಂಠಿತವಾಗುತ್ತದೆ.

ಇಳುವರಿ :

ಹಿಂಗಾರು (ಖುಷ್ಕಿ)	ಕಾಳು (ಕ್ವಿಂ.)	ಮೇವು (ಟನ್)
ಆಳವಾದ ಕಪ್ಪು ಭೂಮಿ	4.8–6.0	1.6
ಮಧ್ಯಮ ಕಪ್ಪು ಭೂಮಿ	3–4	1.0

ಸಂರಕ್ಷಣಾ ಕ್ರಮಗಳು:

ಕೀಟಗಳು:



- **ಸುಳಿನೊಣ:** ಕೀಡೆಯು ಸುಳಿಯ ಬುಡ ಉಜ್ಜಿ ಕತ್ತರಿಸುವುದರಿಂದ ಮಧ್ಯದ ಸುಳಿ ಸಾಯುವುದು. ಸತ್ತ ಸುಳಿಗಳನ್ನು ಕಿತ್ತರೆ ಸರಳವಾಗಿ ಬರುತ್ತದೆ. ಪ್ರತಿಶತ ನೂರರಷ್ಟು ಹಾನಿಯಾಗುವುದು.

ನಿರ್ವಹಣಾ ಕ್ರಮಗಳು: ಜನವರಿ ಮಧ್ಯದಿಂದ ಜೂನ್ ಕೊನೆವರೆಗೆ ಬಿತ್ತಿದ ಬೆಳೆಗೆ ಸುಳಿ ನೋಣದ ಬಾಧೆ ಕಡಿಮೆ. ಬಿತ್ತನೆ ತಡವಾದಲ್ಲಿ ಎಕರೆಗೆ ಒಂದು ಕಿ.ಗ್ರಾಂ. ಹೆಚ್ಚು ಬೀಜವನ್ನು ಬಿತ್ತನೆಗೆ ಬಳಸಿ, ಸುಳಿ ಬಿದ್ದ ಸಸಿಗಳನ್ನು ಕಿತ್ತು ಎಕರೆವಾರು ಸಸಿಗಳ ಸಂಖ್ಯೆ ಕಾಪಾಡಬೇಕು. ಪ್ರತಿ ಕಿ.ಗ್ರಾಂ. ಬೀಜಕ್ಕೆ 5 ಮಿ.ಲೀ. ಕ್ಲೋರ್‌ಪೈರಿಫಾಸ್ 20 ಇ.ಸಿಯನ್ನು 20 ಮಿ.ಲೀ. ನೀರಿನೊಂದಿಗೆ ಮಿಶ್ರಣ ಮಾಡಿ ಬೀಜೋಪಚಾರ ಮಾಡಿ ನೆರಳಲ್ಲಿ ಒಣಗಿಸಿ ಬಿತ್ತಬೇಕು. ಅಥವಾ ಜುಲೈನಿಂದ ಫೆಬ್ರುವರಿವರೆಗೆ ಬಿತ್ತಿದ ಬೆಳೆಗೆ ಎಕರೆಗೆ 12 ಕಿ.ಗ್ರಾಂ. ಶೇ. 3 ರ ಕಾರ್ಬೋಫ್ಯುರಾನ್ ಅಥವಾ 16 ಕಿ.ಗ್ರಾಂ. ಶೇ. 10 ರ ಫೋರೇಟ್ ಹರಳನ್ನು ಬಿತ್ತನೆಗೆ ಮೊದಲು ಸಾಲುಗಳಲ್ಲಿ ಹಾಕಿ ಬಿತ್ತನೆ ಮಾಡಬೇಕು. ತಡವಾಗಿ ಬಿತ್ತನೆ ಮಾಡಿದ ಬೆಳೆಯಲ್ಲಿ ಸುಳಿನೋಣದ ಬಾಧೆಯ ಹತೋಟಿಗೆ 0.3 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 ಎಸ್.ಎಲ್ ಅಥವಾ 0.2 ಗ್ರಾಂ. ಎಸಿಟಾಮಿಪ್ರಿಡ್ 20 ಎಸ್.ಪಿ. ಅಥವಾ 0.5 ಮಿ.ಲೀ. ಸೈಪರಮೆಥ್ರಿನ್ 10 ಇ.ಸಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಬಿತ್ತಿದ 12 ರಿಂದ 14 ದಿವಸದ ನಂತರ ಸಿಂಪರಣೆ ಮಾಡಬೇಕು. ಅತಿ ಹೆಚ್ಚು ಸುಳಿ ಬೀಳುವ ಪ್ರದೇಶಗಳಲ್ಲಿ ಇದೇ ಸಿಂಪರಣೆಯನ್ನು 1 ವಾರದ ನಂತರ ಮತ್ತೊಮ್ಮೆ ಮಾಡಬೇಕು.

- **ಸುಳಿ ತಿಗಣೆ:** ಇದರ ಬಾಧೆ ಹಿಂಗಾರಿ ಜೋಳದಲ್ಲಿ ಮಾತ್ರ ಕಂಡು ಬರುತ್ತದೆ. ಮರಿ ಹಾಗೂ ಪ್ರೌಢ ಕೀಟಗಳು ಸುಳಿಯಲ್ಲಿ ಗುಂಪು ಗುಂಪಾಗಿದ್ದು ಎಲೆಗಳಿಂದ ರಸ ಹೀರುತ್ತವೆ. ಇದರಿಂದ ಎಲೆಗಳಲ್ಲಿ ಕಂದಿಪೆಪ್ಪೆ ಲೇಪನವಾಗಿ ಬೆಳವಣಿಗೆ ಕುಂಠಿತಗೊಳ್ಳುವುದು.

ನಿರ್ವಹಣಾ ಕ್ರಮಗಳು: ಪ್ರತಿ ಕಿ.ಗ್ರಾಂ. ಬೀಜಕ್ಕೆ 5 ಗ್ರಾಂ ಇಮಿಡಾಕ್ಲೋಪ್ರಿಡ್ 60 ಡಬ್ಲ್ಯೂಎಸ್ ದಿಂದ ಬೀಜೋಪಚಾರ ಮಾಡಬೇಕು. ಅಥವಾ ಬಿತ್ತನೆ ಮಾಡಿದ 25 ದಿನಗಳ ನಂತರ 2 ಮಿ.ಲೀ. ಸೈಪರಮೆಥ್ರಿನ್ 10 ಇ.ಸಿ. ಒಂದು ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. ಎಕರೆಗೆ 150 ಲೀ. ಸಿಂಪರಣಾ ದ್ರಾವಣ ಬೇಕಾಗುವುದು.

- **ಸಸ್ಯ ಹೇನು:** ಎಲೆಗಳ ಕೆಳಗೆ ಗುಂಪಾಗಿ ರಸ ಹೀರುವುದರಿಂದ ಸಕ್ಕರೆ ಜಿಗಿ ಸೋರುವುದು. ಎಲೆಗಳಲ್ಲಿ ಕರಿ ಹಿಪ್ಪೆ ಲೇಪನವಾಗಿ ಎಲೆಗಳು ಒಣಗುವುವು.

ನಿರ್ವಹಣಾ ಕ್ರಮಗಳು: ಶೇ. 5ರ ಹುಲುಗಲ ಅಥವಾ ಕರಿಲಕ್ಕಿ ಸೊಪ್ಪಿನ ಕಷಾಯ ಅಥವಾ ಬೇವಿನ ಎಲೆ ಕಷಾಯ ದ್ರಾವಣವನ್ನು ಸಿಂಪಡಿಸಬೇಕು. ಎಕರೆಗೆ 140 ಲೀ. ಸಿಂಪರಣಾ ದ್ರಾವಣ ಬಳಸಬೇಕು.



- **ಕಾಂಡ ಕೊರೆಯುವ ಹುಳು :** ಎಲೆಯಲ್ಲಿ ಅಡ್ಡಡ್ಡ ಸಾಲಾಗಿ ರಂಧ್ರಗಳು ಕಾಣುವವು ಎಲೆಗಳ ಮಧ್ಯಭಾಗದಲ್ಲಿ ಕೀಡೆಗಳು ಕೆರೆದು ತಿನ್ನುತ್ತವೆ ಮರಿ ಕೀಡೆಗಳು ಕಾಂಡದ ಮಧ್ಯ ಭಾಗವನ್ನು ಸೇರಿ ಕಾಂಡ ಕೊರೆಯುವುದರಿಂದ ಸುಳಿ ಸಾಯುವುದು. ಬೆಳೆದ ದಂಟು ಕೊರೆಯುವುದರಿಂದ ಮೊಳ್ಳು ಕಾಂಡ, ಭಾಗಶ : ತೆನೆ ಜೊಳ್ಳು ಆಗುವುದು.

ನಿರ್ವಹಣಾ ಕ್ರಮಗಳು: ಪ್ರತಿ ಎಕರೆಗೆ 3 ಕಿ.ಗ್ರಾಂ. ನಂತೆ ಕಾರ್ಬೋಫ್ಯುರಾನ್ ಶೇ. 3 ರ ಹರಳು ಅಥವಾ ಲಿಂಡೇನ್ ಶೇ. 1 ರ ಹರಳನ್ನು ಸುಳಿಯಲ್ಲಿ ಹಾಕಬೇಕು. ಅಥವಾ ಕ್ಲೋರಾಂಟ್ರಿನಿಲಿಪ್ರೋಲ್ 18.5 ಎಸ್.ಸಿ @ 0.2 ಪ್ರತಿ ಲೀ. ನೀರಿಗೆ ಬೆರಸಿ 20–25 ದಿವಸದ ಬೆಳೆಗೆ ಸಿಂಪಡಿಸಬೇಕು.

ರೋಗಗಳು:

- **ತುಕ್ಕು ರೋಗ:** ಮೊದಲು ಕೆಳಗಿನ ಎಲೆಗಳ ಮೇಲೆ ರೋಗ ತರುವ ರೋಗಾಣುವಿನ ಕಂದು ಬಣ್ಣದ ಚುಕ್ಕೆಗಳು ಕಾಣಿಸಿಕೊಳ್ಳುವುವು ನಂತರ ಮೇಲಿನ ಎಲೆಗಳಿಗೆ ಹರಡುವುವು.

ನಿರ್ವಹಣಾ ಕ್ರಮಗಳು: ಕೆಳಗಿನ ಎಲೆಗಳಲ್ಲಿ ರೋಗ ಕಂಡ ಕೂಡಲೇ 2 ಗ್ರಾಂ ಮ್ಯಾಂಕೋಜೆಬ್ 75 ಡಬ್ಲ್ಯೂ ಪಿ. ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಒಂದು ವಾರದ ಅಂತರದಲ್ಲಿ ಮೂರು ಸಲ ಸಿಂಪರಣೆ ಮಾಡುವುದರಿಂದ ರೋಗ ಹರಡುವುದನ್ನು ತಡೆಯಬಹುದು.

- **ಕಾಳಿನ ಬೂಸ್ಟ್ ರೋಗ:** ಈ ರೋಗವು ಕಾಳು ಮಾಗುತ್ತಿದ್ದಾಗ ಮಳೆಯಾಗಿ ಹವಾಮಾನದಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ಕಾಣಿಸಿಕೊಳ್ಳುವುದು. ಕಾಳಿನ ಬಣ್ಣ ಕಪ್ಪಾಗುವುದು.



ನಿರ್ವಹಣಾ ಕ್ರಮಗಳು: ರೋಗ ನಿರೋಧಕ ತಳಿ ಡಿ ಎಸ್ ಐ–6 ಉಪಯೋಗಿಸುವುದು ಸೂಕ್ತ.

ಖರ್ಚು ಇಲ್ಲದ ಬೇಸಾಯ ಕ್ರಮಗಳು:

- ಕೊಟ್ಟಿಗೆ ಅಥವಾ ಕಾಂಪೋಸ್ಟ್ ಗೊಬ್ಬರವನ್ನು ಬಿತ್ತನೆಗೆ 3 ವಾರ ಮೊದಲೇ ಮಣ್ಣಿನಲ್ಲಿ ಬೆರೆಸಬೇಕು
- ಅಧಿಕೃತವಾದ ಬಿತ್ತನೆ ಬೀಜವನ್ನು ಬಳಸಿ ಸೂಕ್ತ ಸಸಿ ಸಂಖ್ಯೆ ಕಾಪಾಡಬೇಕು
- ಸೂಚಿಸಿದ ಕಾಲದಲ್ಲಿಯೇ ಬಿತ್ತನೆ ಮಾಡಬೇಕು
- ಮೊಳಕೆ ಬರುವಾಗ ಬೆಳವಣಿಗೆ ಹಂತದಲ್ಲಿ ತೆನೆ ಬರುವ ಮೊದಲು ಮತ್ತು ಕಾಳು ತುಂಬುವಾಗ ತಪ್ಪದೇ ನೀರು ಹಾಯಿಸಬೇಕು
- ಪಕ್ಕದಲ್ಲಿ ಬರುವ ಕವಲುಗಳನ್ನು 30 ದಿವಸಗಳಲ್ಲಿ ತಪ್ಪದೇ ತೆಗೆಯಬೇಕು

ಲೇಖಕರು

ಶ್ರೀ. ಜಿ.ಬಿ. ವಿಶ್ವನಾಥ
ವಿಷಯ ತಜ್ಞರು (ಬೇಸಾಯ ಶಾಸ್ತ್ರ)

ಶ್ರೀ. ಎಸ್. ಎಂ. ವಾರದ
ವಿಷಯ ತಜ್ಞರು (ಮಣ್ಣು ವಿಜ್ಞಾನ)

ಶ್ರೀಮತಿ. ಶ್ರೀದೇವಿ
ವಿಷಯ ತಜ್ಞರು (ಗೃಹ ವಿಜ್ಞಾನ)

ಡಾ. ಎಸ್. ಎಸ್. ಹಿರೇಮಠ
ವಿಷಯ ತಜ್ಞರು (ಸಸ್ಯ ಸಂರಕ್ಷಣೆ)

ಶ್ರೀ. ಪ್ರವೀಣ ಯಡಹಳ್ಳಿ
ವಿಷಯ ತಜ್ಞರು (ತೋಟಗಾರಿಕೆ)

ಶ್ರೀ. ಶಂಕರಗೌಡ ಎಸ್. ಪಾಟೀಲ
ಕ್ಷೇತ್ರ ವ್ಯವಸ್ಥಾಪಕರು

ಸಂಪಾದಕರು : **ಶ್ರೀ. ಐ.ಆರ್. ಪಾಟೀಲ**
ಅಧ್ಯಕ್ಷರು, ಐಸಿಎಆರ್– ಕೆಎಲ್ಇ ಕೆವಿಕೆ

ಮುಖ ವಿನ್ಯಾಸ : **ಶ್ರೀ. ಮಂಜುನಾಥ ಪಿ.ಐ.**
ಗಣಕಯಂತ್ರ ಸಹಾಯಕರು

ಅಕ್ಷರ ಜೋಡಣೆ : **ಶ್ರೀಮತಿ. ವೀಣಾ ಬನ್ನೂರ**
ಬೆರಳಚ್ಚುಗಾರರು

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಹಿರಿಯ ವಿಜ್ಞಾನಿಗಳು ಹಾಗೂ ಮುಖ್ಯಸ್ಥರು

ಐಸಿಎಆರ್–ಕೆಎಲ್ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ–591 147

ತಾಲೂಕ: ಬೈಲಹೊಂಗಲ, ಜಿಲ್ಲೆ: ಬೆಳಗಾವಿ. ದೂರವಾಣಿ ಸಂಖ್ಯೆ: 9535604747

ಮಿಂಚಂಚೆ: kvk.Belagavi2@icar.gov.in, ಅಂತರ್ಜಾಲ: www.klekvk.org

Shri Bhavani Hubli # 94481 16253

ICAR

KLE KVK

ಕೆಎಲ್ಇ ಸಂಸ್ಥೆಯ

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ

ಬೈಲಹೊಂಗಲ ತಾಲೂಕು, ಬೆಳಗಾವಿ ಜಿಲ್ಲೆ

ಹಿಂಗಾರಿ ಜೋಳ ಬೆಳೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು



ಪ್ರತಿಗಳು: 1000

2018–19